ದಟ್ಟ ಅರಣ್ಯ ವಾಸಿಯಾದ ಇದನ್ನು ಮಳೆಕಾಡಿನ ಕಾವಲುಗಾರ (**Guard of the Rain Forest**) ಎಂದೂ, ಹಲವಾರು ಜಾತಿಯ ಹಣ್ಣನ್ನು ತಿಂದು ಅವುಗಳ ಬೀಜ ಪ್ರಸರಣ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿ ಅರಣ್ಯವನ್ನು ಪರೋಕ್ಷವಾಗಿ ಬೆಳೆಸುವುದರಿಂದ **‘Farmer of the Forest’** (ಅರಣ್ಯ ಬೆಳೆಸುವ ರೈತ) ಎಂದು ಬಣ್ಣಿಸುತ್ತಾರೆ.

ಏಷ್ಯಾ ಖಂಡದ ಅತಿ ದೊಡ್ಡ ಹಾರ್ನ್‌ಬಿಲ್ ಎಂಬ ಹೆಗ್ಗಳಿಕೆಯನ್ನು ಇದು ಪಡೆದಿದೆ. ಇದರ ಉದ್ದ 1.3 ಮೀ(130 ಸೆಂ.ಮೀ). ವಯಸ್ಕ ಹಕ್ಕಿಯ ತೂಕ ಸಾಧಾರಣ 3 ರಿಂದ 4 ಕೆ.ಜಿ. ಇದನ್ನು ಅವನತಿಯ ಅಂಚಿನಲ್ಲಿರುವ ಒಂದು ಪ್ರಮುಖ ಹಕ್ಕಿಯೆಂದು **IUCN** ನವರು ವಿಭಾಗಿಸಿದ್ದಾರೆ. ಗ್ರೇಟ್ ಹಾರ್ನ್ ಬಿಲ್ ಎಂದು ಕರೆಯಲ್ಪಡುವ ಇದರ ವೈಜ್ಞಾನಿಕ ಹೆಸರು **‘Buceros bicornis’.**

ಕನ್ನಡದಲ್ಲಿ ದೊಡ್ಡ ದಾಸಮಂಗಟ್ಟೆ ಎಂದು ಕರೆಯುತ್ತಾರೆ. ಉತ್ತರ ಕನ್ನಡದಲ್ಲಿ ‘ಗರುಡ’ ಎಂದು ಕರೆಯುತ್ತಾರೆ. ಸುಳ್ಯ, ಪುತ್ತೂರು, ಕೊಡಗಿನಲ್ಲಿ ‘ಮಲೇರಪ್ಪ’ ಎಂದು ಕರೆಯುತ್ತಾರೆ. ಗ್ರೀಕ್ ಭಾಷೆಯಲ್ಲಿ **buceros** ಎಂದರೆ ಹಸುವಿನ ಕೊಂಬು ಎಂದು ಅರ್ಥ. ಇನ್ನೂ **bicornis** ಎಂದರೆ ಎರಡು ಕೊಂಬಿನಿಂದ ಕೂಡಿರುವುದು. ಇವನ್ನೂ **Rhinoceros** ಅಂದರೆ ಪಕ್ಷಿ ಲೋಕದ ‘ಖಡ್ಗ ಮೃಗ’ವೆಂದು ಉಲ್ಲೇಖಿಸಿದ್ದಾರೆ. ಕಹಳೆಯಂತಹ ಕೊಂಬು ಕೊಕ್ಕಿನ ಮೇಲೆ ಖಡ್ಗ ಮೃಗಕ್ಕಿರುವಂತೆ ಇರುವುದರಿಂದ ಈ ಹೆಸರು ಬಂದಿರಬಹುದು.

ಇದು ಹದ್ದಿಗಿಂತಲೂ ಬೃಹತ್ ಗಾತ್ರದ ಹಕ್ಕಿ. ದೊಡ್ಡಗಾತ್ರದ ಕಪ್ಪು–ಬಿಳಿ, ಹಳದಿ ಬಣ್ಣದ ಗರಿಗಳನ್ನು ಹೊಂದಿರುವ ಈ ಹಕ್ಕಿಗೆ ಕೃಷ್ಣ ವರ್ಣದ ಮುಖವಿದೆ. ಇದರ ದೇಹದ ಮೇಲ್ಮೈ ಮತ್ತು ಕೆಳಮೈ ಕಪ್ಪು. ಕೊಕ್ಕು ಮತ್ತು ಕೋಡು ಹಳದಿ ಬಣ್ಣದ್ದಾದರೆ ಕೆಂಪು ಮತ್ತು ಬಿಳಿಯ ಬಣ್ಣದ ಕೆಳ ದವಡೆ ಹೊಂದಿದೆ. ಬಾಲದ ಬುಡದಲ್ಲಿ ಸ್ರವಿಸುವ ದ್ರವದಿಂದಾಗಿಯೇ ಕಟ್ಟು ಮತ್ತು ಗಂಟಲು ಹಳದಿ ಬಣ್ಣದ್ದು. ರೆಕ್ಕೆಯ ಮಧ್ಯೆ ಬಿಳಿ ಮತ್ತು ಹಳದಿ ಪಟ್ಟಿ, ಉದ್ದನೆಯ ಬಿಳಿಬಾಲದಲ್ಲಿ ಅಗಲವಾದ ಕಪ್ಪು ಅಡ್ಡಪಟ್ಟಿ ಇದೆ. ಗಂಡು ಮತ್ತು ಹೆಣ್ಣು ಹಕ್ಕಿಯನ್ನು ಸುಲಭವಾಗಿ ಗುರುತಿಸಬಹುದು. ಗಂಡು ಹಕ್ಕಿಯ ಕೋಡಿನ ಮುಂಭಾಗದ ತಳ ಮತ್ತು ಹಿಂಭಾಗ ಕಪ್ಪು ಬಣ್ಣದಿಂದ ಕೂಡಿದೆ. ಗಂಡಿನ ಕಣ್ಣಿನ ಸುತ್ತಲ ಚರ್ಮ ಕಪ್ಪಗಿದ್ದು, ಕಣ್ಣು ಕೆಂಪಗಿದೆ. ಆದರೆ ಹೆಣ್ಣಿನ ಕಣ್ಣಿನ ಸುತ್ತಲ ಚರ್ಮ ಕೆಂಪಗಿದ್ದು, ಕಣ್ಣು ಬಿಳಿಯ ಬಣ್ಣದಿಂದ ಕೂಡಿದೆ.

ಈ ಗ್ರೇಟ್ ಹಾರ್ನ್‌ಬಿಲ್ ಎಲ್ಲಾದರೂ ಇದೆ ಎಂದರೆ, ಅದು ಇಲ್ಲಿಯ ಭೂ ಆವಾಸದ ವಸ್ತುಸ್ಥಿತಿಗೆ ಕನ್ನಡಿ ಇದ್ದಂತೆ. ಹಿಮಾಲಯದ ತಪ್ಪಲಲ್ಲಿ ಮತ್ತು ಪೂರ್ವಾಂಚಲ ಹಿಮಾಲಯದಲ್ಲಿಯೂ ಇವು ಕಂಡುಬರುತ್ತವೆ.

ಪಕ್ಷಿ, ಪ್ರಾಣಿ ಸಂಕುಲಗಳು ಶೀಘ್ರ ಗತಿಯಲ್ಲಿ ಕಾಣೆಯಾಗುತ್ತ ವಿನಾಶದ ಅಂಚಿಗೆ ತಲುಪಿವೆ. ಈ ಹಕ್ಕಿಯೂ ಅದಕ್ಕೆ ಹೊರತಲ್ಲ. ಕಾಡಿನ ನಾಶದ ಪರಿಣಾಮವಾಗಿ ಇವಕ್ಕೆ ಬೇಕಾದ ಅತ್ತಿ, ಆಲ, ಧೂಪ, ಅಂಜೂರ ಜಾತಿಯ ಹಣ್ಣಿನ ಮರಗಳು ಕಣ್ಮರೆಯಾಗುತ್ತಿರುವುದು ಈ ಹಕ್ಕಿಯ ಅವಸಾನಕ್ಕೆ ಪ್ರಮುಖ ಕಾರಣ.

ಬೃಹತ್ ಗಾತ್ರದ ಮರಗಳ ಪೊಟರೆಯಲ್ಲಿ ಇವು ಗೂಡು ಮಾಡುತ್ತವೆ. ಕಾಡಿನ ಒಣಗಿದ, ಸತ್ತ ಮರಗಳು ಇವುಗಳ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎನ್ನುವುದೂ ದಿಟ.

ಭಾರತದಲ್ಲಿ ಕಂಡುಬರುವ ಒಟ್ಟು 9 ಹಾರ್ನ್‌ಬಿಲ್ ಪೈಕಿ ದಕ್ಷಿಣ ಭಾರತದಲ್ಲಿ 4 ಪ್ರಬೇಧಗಳಿವೆ. ಈ ನಾಲ್ಕೂ ಪ್ರಬೇಧಗಳು ಪಶ್ಚಿಮ ಘಟ್ಟದ ಭಾಗವಾಗಿರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ಕಂಡು ಬರುವುದು ಒಂದರ್ಥದಲ್ಲಿ ಹೆಮ್ಮೆ ಎಂದೇ ಹೇಳಬಹುದು.

ಭೂ ಆವಾಸದಲ್ಲಿ ಆಗುವ ಯಾವುದೇ ಬದಲಾವಣೆ ಜೀವ ವೈವಿಧ್ಯದ ಮೇಲೆ ನೇರ ಪರಿಣಾಮ ಬಿರುತ್ತದೆ. ದಟ್ಟ ಕಾಡಿನ ಪರಿಸರದ ಆರೋಗ್ಯ–ಅನಾರೋಗ್ಯಗಳಿಗೆ ಈ ಪಕ್ಷಿಗಳು ಅದ್ಭುತವಾದ ದಿಕ್ಸೂಚಿಗಳಂತೆ ಎಂದು ವಿಜ್ಞಾನಿಗಳು ಹೇಳುತ್ತಾರೆ.

ಕಳೆದ ಜನವರಿಯಲ್ಲಿ ಹಳಿಯಾಳ –ದಾಂಡೇಲಿಯಲ್ಲಿ ‘ಹಾರ್ನ್‌ಬಿಲ್’ ಉತ್ಸವ ನಡೆಯಿತು. ಇಷ್ಟು ಕಾಳಜಿ ಮತ್ತು ಮುತುವರ್ಜಿ ಸಾಲದು. ಅತ್ಯದ್ಭುತ ಪರಿಸರದ ಕೊಡುಗೆಯಾದ ಇವುಗಳ ಸಂರಕ್ಷಣೆಯಲ್ಲಿ ಇನ್ನೂ ಗಂಭೀರವಾದ ಪ್ರಯತ್ನಗಳ ಅಗತ್ಯವಿದೆ.





